

ಚಂದ್ರಕಾಂತ ಕುಸನೂರರ ಅಮೂರ್ತ ಕಲಾಕೃತಿಗಳು

ಆ ಕಾರ್ಯಕ್ರಮದ ಅಧ್ಯಕ್ಷರು ಬೇಂದ್ರೆ. ಕುಸನೂರರ ಛಂದೋಬದ್ಧ ಕಾವ್ಯವಾಚನವನ್ನು ಕೇಳಿ ಇಷ್ಟಪಟ್ಟ ಬೇಂದ್ರೆಯವರು ಮನೆಗೆ ಆಹ್ವಾನಿಸಿದರು. ಮರುದಿನ ಮನೆಗೆ ಹೋದ ಕುಸನೂರರು ಬೇಂದ್ರೆಯವರೊಂದಿಗಿನ ಮಾತುಕತೆಯಲ್ಲಿ ಸಂಜೆಯವರೆಗೂ ಮುಳುಗಿದರು. ನಂತರ ಹೊರಡುವಾಗ ಉಳಿದ ಎಲ್ಲರಿಗೂ ಸಕ್ಕರೆಯನ್ನು ಕೊಟ್ಟ ಬೇಂದ್ರೆಯವರು ಕುಸನೂರರಿಗೆ ಮಾತ್ರ ಕೊಡಲಿಲ್ಲ. ಯಾಕೆ ಕೊಡಲಿಲ್ಲ ಎಂದು ಅವರೊಂದಿಗೆ ಬಂದಿದ್ದ ಮನೋಹರ ಗ್ರಂಥಮಾಲೆಯ ಜಿ.ಬಿ. ಜೋಶಿಯವರ ಮಗ ರಾಮ ಜೋಶಿ ಕೇಳಿದ್ದಕ್ಕೆ, "ಕನ್ನಡದಾಗ ಬರಿತೀನಿ ಅಂತ ಅವರು ನನಗ ವಚನ ಕೊಟ್ಟರ ಹಾಕ್ತೀನಿ" ಎಂದರಂತೆ. ಅದಕ್ಕೆ ಕುಸನೂರರು ಓದಲು ಬರೆಯಲು ಬಾರದ ಕನ್ನಡವನ್ನು ಪ್ರಯತ್ನಪಟ್ಟು ಕಲಿತು ಕನ್ನಡದಲ್ಲಿ ಬರೆಯಲು ಪ್ರಾರಂಭಿಸಿದರು. ಬೇಂದ್ರೆಯವರು ಮಾಡಿದಂತೆಯೇ ಕನ್ನಡದಲ್ಲಿ ಬರೆಯಲು ಕುಸನೂರರನ್ನು ಪ್ರೇರೇಪಿಸಿ ಒತ್ತಾಸೆಯಾಗಿ ನಿಂತವರು ಕವಿ ಶಾಂತರಸರು. ಅವರಿಲ್ಲದಿದ್ದರೆ ಉರ್ದು ಕವಿಯಾಗಿಯೇ ಉಳಿಯುತ್ತಿದ್ದೆ ಎಂದು ಕುಸನೂರರು ನೆನೆಸಿಕೊಳ್ಳುತ್ತಿದ್ದರು.

ಹೀಗೆ ಕನ್ನಡಕ್ಕೆ ಪ್ರವೇಶ ಪಡೆದ ಕುಸನೂರರು ಬಹುಬೇಗ ಉತ್ಕೃಷ್ಟ ಕಾವ್ಯವನ್ನು ಕೊಟ್ಟರು. ಜಪಾನಿ ಕಾವ್ಯ ಪ್ರಕಾರ ಹಾಯ್ಕುವನ್ನು ಮೊದಲ ಬಾರಿಗೆ ಕನ್ನಡಕ್ಕೆ ಪರಿಚಯಿಸಿದರು. ಪಿ. ಲಂಕೇಶ್ ಸಂಪಾದಿಸಿದ ಕನ್ನಡ ಕಾವ್ಯಸಂಗ್ರಹ 'ಅಕ್ಷರ ಹೊಸ ಕಾವ್ಯ'ದಲ್ಲಿ ಅವರ ಹಾಯ್ಕುಗಳು ಮತ್ತು ಕವಿತೆಗಳು ಪ್ರಕಟಗೊಂಡವು. ಅವರ ಪ್ರಯೋಗಶೀಲತೆ ಹಾಯ್ಕುವಿಗಷ್ಟಕ್ಕೇ ನಿಲ್ಲದೇ ಪಾಶ್ಚಾತ್ಯ